# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 56/2022

ಸಿಡಬ್ಲು: 20 / ಪಿಡಬ್ಲು: 12

ದಿನಾಂಕ: 01.03.2025

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಜಾಫರ ಬಚ್ಚೇರಿ |
| ತಂದೆ ಹೆಸರು | : | ಇಮಾಮಸಾಬ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಪೋಲೀಸ ಮುಖ್ಯ ಪೇದೆ 969, ಮುಂಡರಗಿ ಪೋಲೀಸ ಠಾಣೆ |
| ವಾಸ ಸ್ಥಳ | : | ಮುಂಡರಗಿ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ನಾನು ಡಿಸೆಂಬರ - 2018 ರಿಂದ ಇಲ್ಲಿಯವರೆಗೂ ಮುಂಡರಗಿ ಪೋಲೀಸ ಠಾಣೆಯಲ್ಲಿ ಪೋಲೀಸ ಮುಖ್ಯ ಪೇದೆಯಾಗಿ ಕೆಲಸ ಮಾಡುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕ: 05.03.2022 ರಂದು ಚಾಸಾ-29 ರವರು ನನಗೆ ಮತ್ತು ಹೆಚ್.ಸಿ. 961 ರವರಿಗೆ ಈ ಪ್ರಕರಣದ ಆರೋಪಿಯನ್ನು ಪತ್ತೆ ಹಚ್ಚಿ ಠಾಣೆಗೆ ಕರೆತರುವಂತೆ ಆದೇಶ ಮಾಡಿರುತ್ತಾರೆ.

3. ಆ ಪ್ರಕಾರ ನಾನು ಹಾಗೂ ಹೆಚ್.ಸಿ. 961 ರವರು ಅದೇ ದಿನ ಡೋಣಿ, ಡೋಣಿ ತಾಂಡಾ, ದಿಂಡೂರು, ಸಿಂಗಟರಾಯನಕೆರಿ, ಸಿಂಗಟರಾಯನಕೆರಿ ತಾಂಡಾ ಇಲ್ಲಿ ಎಲ್ಲಾ ಕಡೆ ಹುಡುಕಾಡಿ, ನಂತರ ಅತ್ತಿಕಟ್ಟಿ ಗ್ರಾಮ ಮತ್ತು ತಾಂಡಾದ ಹೊರವಲಯದಲ್ಲಿ ಹುಡುಕಾಡುವಾಗ, ಸಾರ್ವಜನಿಕ ರಸ್ತೆಗೆ ಹೊಂದಿಕೊಂಡಿರುವ ಹೊಲದಲ್ಲಿ ಆರೋಪಿಯು ಸಿಕ್ಕಿರುತ್ತಾನೆ, ಆಗ ಸಮಯ ಮದ್ಯಾಹ್ನ 02.00 ಗಂಟೆಯಾಗಿತ್ತು. ಆತನನ್ನು ಹಿಡಿದುಕೊಂಡು ಬಂದು ಚಾಸಾ-29 ರವರ ಮುಂದೆ ಮದ್ಯಾಹ್ನ 03.00 ಗಂಟೆಗೆ ಹಾಜರಪಡಿಸಿರುತ್ತೇವೆ.

4. ನಾನು ಹಿಡಿದುಕೊಂಡು ಬಂದು ಚಾಸಾ-29 ರವರ ಮುಂದೆ ಹಾಜರ ಪಡಿಸಿದ ವ್ಯಕ್ತಿಯು ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣಿಸುವ ಆರೋಪಿಯಾಗಿರುತ್ತಾನೆ.

5. ಆ ಸಮಯದಲ್ಲಿ ಆರೋಪಿ ಧರಿಸಿದ್ದ ಶರ್ಟನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು

ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.8 ಎಂದು ಗುರುತಿಸಲಾಗಿರುತ್ತದೆ.

6. ಈ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟಿ ಸವಾಲುಃ ಶ್ರೀ ಎಸ್.ವಿ. ಗ್ರಾಮಪುರೋಹಿತ, ಆರೋಪಿ ಪರ (CLADC) ವಕೀಲರಿಂದಃ**

7. ಚಾಸಾ-29 ರವರು ನಮಗೆ ಲಿಖಿತ ಆದೇಶವನ್ನು ಮಾಡಿದ್ದರು. ಸದರಿ ಆದೇಶವನ್ನು ಅದೇ ದಿನ ಬೆಳಿಗ್ಗೆ 08.00 ಗಂಟೆಗೆ ಪಡೆದುಕೊಂಡಿರುತ್ತೇವೆ. ಆ ದಿನ ನಾವು ಆರೋಪಿಯನ್ನು ಹುಡುಕಾಡಲು ಖಾಸಗಿ ವಾಹನದಲ್ಲಿ ಹೋಗಿರುತ್ತೇವೆ. ನನ್ನ ಹೇಳಿಕೆಯಲ್ಲಿ ನಾನು ನನಗೆ ಲಿಖಿತ ಆದೇಶವನ್ನು ಮಾಡಲಾಗಿತ್ತು ಎಂದು ಹೇಳಿರುವುದಿಲ್ಲ.

8. ನನ್ನ ಹೇಳಿಕೆಯಲ್ಲಿ ಡೋಣಿ, ಡೋಣಿ ತಾಂಡಾ, ದಿಂಡೂರು, ಸಿಂಗಟರಾಯನಕೆರಿ, ಸಿಂಗಟರಾಯನಕೆರಿ ತಾಂಡಾ, ಅತ್ತಿಕಟ್ಟಿ ಗ್ರಾಮ ಮತ್ತು ತಾಂಡಾದ ಹೊರವಲಯದಲ್ಲಿ ಆರೋಪಿಯನ್ನು ಖಾಸಗಿ ವಾಹನದಲ್ಲಿ ಹೋಗಿ ಹುಡುಕಾಡಿರುತ್ತೇವೆ ಎಂದು ಹೇಳಿರುವುದಿಲ್ಲ.

9. ಆರೋಪಿ ಮೊದಲು ಠಾಣೆಗೆ ತನ್ನ ಕೌಟುಂಬಿಕ ಸಮಸ್ಯೆಗೆ ಸಂಬಂಧಿಸಿದಂತೆ ಬರುತ್ತಿದ್ದುದರಿಂದ ಆತನ ಚೆಹೆರೆಯ ಬಗ್ಗೆ ನನಗೆ ಗೊತ್ತಿತ್ತು. ಆರೋಪಿ ತನ್ನ ಕೌಟುಂಬಿಕ ಸಮಸ್ಯೆಗೆ ಸಂಬಂಧಿಸಿದಂತೆ ಠಾಣೆಗೆ ಬರುತ್ತಿದ್ದನು ಎಂದು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ.

10. ಮು.ಮಾ.8 ಆರೋಪಿ ಧರಿಸಿದ್ದ ಶರ್ಟ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಆ ದಿನ ನಾವು ಪತ್ತೆ ಹಚ್ಚಿರುವುದಿಲ್ಲ ಮತ್ತು ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**